**ದಿನಾಂಕಃ 09.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ. ಹೆಚ್ ಕೆ ವಕೀಲರಿಂದಃ-**

1. ನನ್ನ ತಂದೆಯ ಹೆಸರು ಹುಚ್ಚೇಗೌಡ. ಸದರಿ ದಾವಾ ಆಸ್ತಿ ಮಂಜೂರಾತಿಗಾಗಿ ಯಾರು ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ನನ್ನ ತಂದೆ ಎನ್ನುತ್ತಾರೆ. ನನ್ನ ತಂದೆ ಹೆಸರಿಗೆ ದಾವಾ ಅಸ್ತಿಯನ್ನು ಹೊರತುಪಡಿಸಿ 5 ಎಕರೆ 16 ಗುಂಟೆ ಜಮೀನು ಇತ್ತು ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿಯ ಹೆಸರಿನಲ್ಲಿ 4 ಎಕರೆ 38 ಗುಂಟೆ ಮತ್ತು ಅದಕ್ಕೂ ಹೆಚ್ಚು ಜಮೀನು ಇದ್ದರೆ ಸರ್ಕಾರದಿಂದ ಜಮೀನು ಮಂಜೂರು ಮಾಡುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸ ನಂ.20ರಲ್ಲಿ ಒಟ್ಟು 140 ಎಕರೆ ಜಮೀನು ಇದ್ದು ಸದರಿ 140 ಜಮೀನಿನಲ್ಲಿ 80 ಎಕರೆ ಜಮೀನು ಅರಣ್ಯ ಇಲಾಖೆಗೆ ಹೋಗಿದೆ ಎಂದರೆ ಸರಿಯಲ್ಲ. ಸದರಿ ಉಳಿದ 60 ಎಕರೆ ಜಮೀನನ್ನು ಹದ್ದು-ಬಸ್ತು ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಪರವಾಗಿ ನನ್ನ ಸಹೋದರ ರಾಮಸ್ವಾಮಿಗೆ ಸರ್ಕಾರದಿಂದ ಮಂಜೂರಾಗಿ ನನ್ನ ಹೆಸರಿಗೆ ದಾನ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸದರಿ ನಿಪಿ-8 ಮಂಜೂರಾತಿ ಪತ್ರದಲ್ಲಿ ನಿಬಂಧನೆ ಇದ್ದು 15 ವರ್ಷ ಪರಭಾರೆ ಮಾಡಬಾರದು ಎಂದು ಷರತ್ತು ಇದೆ ಎಂದರೆ ನನಗೆ ಗೊತ್ತಿಲ್ಲ.

2. ನನ್ನ ಸಹೋದರ ಷರತ್ತನ್ನು ಉಲ್ಲಂಘಿಸಿ ನನ್ನ ಹೆಸರಿಗೆ ದಾನ ಪತ್ರ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಲಪಾಟಾಯಿಸುವ ಉದ್ದೇಶದಿಂದ ನಿಪಿ-8

ದಾಖಲೆಯನ್ನು ಸೃಷ್ಟಿಸಿ ಸುಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ